# ಕನ್ನಡ / KANNADA

## ಪತ್ರಿಕೆ I / Paper I

## (ಸಾಹಿತ್ಯ) / (LITERATURE)

| ವೇಳೆ : **ಮೂರು** ಗಂಟೆ<br>*Time Allowed* : ***Three Hours*** | ಗರಿಷ್ಠ ಅಂಕಗಳು : **250**<br>*Maximum Marks* : ***250*** |
|---|---|

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು ಭಾಗಗಳಲ್ಲಿ** ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು ***5***ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1.** **ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು.** *10×5=50*

(a) ಭಾಷೆ ಎಂದರೇನು ? ವಿದ್ವಾಂಸರ ವ್ಯಾಖ್ಯೆಗಳ ಹಿನ್ನೆಲೆಯಲ್ಲಿ ಚರ್ಚಿಸಿರಿ *10*

(b) ರಾಘವಾಂಕನ ಹರಿಶ್ಚಂದ್ರ ಕಾವ್ಯದ ಜೀವನ ಸಂದೇಶ *10*

(c) ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಕಾಳಜಿ *10*

(d) ದಾಸ ಸಾಹಿತ್ಯಕ್ಕೆ ಪುರಂದರದಾಸರ ಕೊಡುಗೆ *10*

(e) ದಲಿತ ಸಾಹಿತ್ಯದ ಸ್ವರೂಪ–ಲಕ್ಷಣಗಳು *10*

**Q2.** (a) ದ್ರಾವಿಡ ಭಾಷಾ ವೈಲಕ್ಷಣ್ಯಗಳನ್ನು ಕುರಿತು ವಿವರಿಸಿರಿ. *20*

(b) ಕನ್ನಡ ನವೋದಯ ಕಾವ್ಯ ಪರಂಪರೆ ಮತ್ತು ಪ್ರಯೋಗ ವೈವಿಧ್ಯವನ್ನು ವಿವೇಚಿಸಿರಿ. *20*

(c) ಪಂಪಭಾರತದ ನಾಯಕ ಯಾರು ? ಅವನ ಪಾತ್ರವನ್ನು ಕವಿ ಹೇಗೆ ಚಿತ್ರಿಸಿದ್ದಾನೆ ವಿವರಿಸಿರಿ. *10*

**Q3.** (a) ಕನ್ನಡದ ಪ್ರಮುಖ ಸಾಮಾಜಿಕ ಮತ್ತು ಪ್ರಾದೇಶಿಕ ಉಪಭಾಷೆಗಳ ಕುರಿತು ವಿವರಿಸಿರಿ. *20*

(b) ಕನ್ನಡದ ನವ್ಯಕಾವ್ಯ ನಡೆದು ಬಂದ ದಾರಿಯನ್ನು ವಿವೇಚಿಸಿರಿ. *20*

(c) ನಾಗಚಂದ್ರನ ಪಂಪರಾಮಾಯಣದ ಅನನ್ಯತೆಯನ್ನು ಕುರಿತು ಚರ್ಚಿಸಿರಿ. *10*

**Q4.** (a) ಕುಮಾರ ವ್ಯಾಸ ಭಾರತ ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳಿಗೂ ಕನ್ನಡಿ ಹಿಡಿಯುತ್ತದೆ – ಈ ಮಾತನ್ನು ಚರ್ಚಿಸಿರಿ. *20*

(b) ಪ್ರಗತಿಶೀಲ ಸಾಹಿತ್ಯದ ತಾತ್ವಿಕ ನೆಲೆಗಳನ್ನು ಕುರಿತು ಚರ್ಚಿಸಿರಿ. *20*

(c) ಕನ್ನಡ ಭಾಷೆಯಲ್ಲಿ ಸ್ವೀಕರಣ ಕುರಿತು ಸೋದಾಹರಣವಾಗಿ ವಿವರಿಸಿರಿ. *10*

## SECTION B

**Q5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು.** *10×5=50*

(a) ಕಾವ್ಯಲಕ್ಷಣಗಳನ್ನು ಅಲಂಕಾರಿಕರ ವ್ಯಾಖ್ಯೆಗಳೊಂದಿಗೆ ಚರ್ಚಿಸಿರಿ. *10*

(b) ವಿಮರ್ಶೆಯ ಕಾರ್ಯ *10*

(c) ಬಾದಾಮಿ ಗುಹೆಗಳು *10*

(d) ಸಂಗೀತಕ್ಕೆ ವಿಜಯನಗರ ಅರಸರ ಕೊಡುಗೆ *10*

(e) ಹೊಯ್ಸಳರ ವಾಸ್ತುಶಿಲ್ಪ *10*

**Q6.** (a) ಕಾವ್ಯದಲ್ಲಿ ಅಲಂಕಾರಗಳ ಬಳಕೆ ಮತ್ತು ಅವುಗಳ ಮಹತ್ವವನ್ನು ವಿವರಿಸಿರಿ. *20*

(b) ಕರ್ನಾಟಕ ಸಂಸ್ಕೃತಿಯಲ್ಲಿ 'ಧರ್ಮ ಸಮನ್ವಯತೆ' ಕುರಿತು ವಿಶ್ಲೇಷಿಸಿರಿ. *20*

(c) ಸ್ತ್ರೀವಾದಿ ವಿಮರ್ಶೆಯ ತಾತ್ವಿಕತೆಯನ್ನು ಚರ್ಚಿಸಿರಿ. *10*

**Q7.** (a) ರಸ ಸಿದ್ಧಾಂತ ಕುರಿತು ಭಾರತೀಯ ಅಲಂಕಾರಿಕರಲ್ಲಿ ನಡೆದ ಚರ್ಚೆಯನ್ನು ಪರಿಶೀಲಿಸಿರಿ. *20*

(b) ಕಾವ್ಯ ಮೀಮಾಂಸೆಯಲ್ಲಿ ಧ್ವನಿ ಸಿದ್ಧಾಂತ ಮತ್ತು ಧ್ವನಿಪ್ರಭೇದಗಳನ್ನು ವಿವೇಚಿಸಿರಿ. *20*

(c) ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಧರ್ಮಗಳನ್ನು ಪರಿಚಯಿಸಿರಿ. *10*

**Q8.** (a) ಕನ್ನಡ ಸಾಹಿತ್ಯದಲ್ಲಿ ಪ್ರಸಾರಗೊಂಡಿರುವ ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು ವಿವರಿಸಿರಿ. *20*

(b) ಹರಿದಾಸರ ಕೀರ್ತನೆಗಳು ಮತ್ತು ಸಂಗೀತದ ಅಂತರ್ ಸಂಬಂಧವನ್ನು ವಿಶ್ಲೇಷಿಸಿರಿ. *20*

(c) ನವ್ಯ ವಿಮರ್ಶೆಯ ತಾತ್ವಿಕ ನೆಲೆಗಳಾವುವು ? ವಿವರಿಸಿರಿ. *10*